# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 3 (26) |
| ಸದಸ್ಯರ ಹೆಸರು | : | ಶ್ರೀ ವೈ. ಎಂ. ಸತೀಶ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 27.01.2026 |
| ಉತ್ತರಿಸಬೇಕಾದ ಸಚಿವರು | : | ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ಬಳ್ಳಾರಿ ಮಹಾನಗರ ಪಾಲಿಕೆಯಲ್ಲಿನ ವಾರ್ಡ್ ನಂ.19 ರಲ್ಲಿನ ಅಪಾರ್ಟ್‌ಮೆಂಟ್ ಫ್ಲಾಟ್‌ಗಳ ಆಸ್ತಿ ತೆರಿಗೆಯಲ್ಲಿ ಕರ ಸಂಗ್ರಹಿಸಿ ಪಾಲಿಕೆಯ ಖಾತೆಗೆ ಜಮಾ ಮಾಡದೆ ದುರುಪಯೋಗ ಮಾಡಿಕೊಂಡಿರುವ ಅಧಿಕಾರಿ/ನೌಕರರುಗಳ ವಿರುದ್ಧ ಇಲಾಖಾ ವಿಚಾರಣೆ ಕೈಗೊಂಡಿರುವುದು ನಿಜವೇ:(ವಿವರಗಳನ್ನು ಒದಗಿಸುವುದು); | ಹೌದು.<br>ಬಳ್ಳಾರಿ ಮಹಾನಗರಪಾಲಿಕೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ವಲಯ ಕಛೇರಿ-1ರ ವ್ಯಾಪ್ತಿಯಲ್ಲಿ ಬರುವ ವಾರ್ಡ್ ನಂ:18/19 ರ ವ್ಯಾಪ್ತಿಯ ಅನಂತಪುರ ರಸ್ತೆಯ ಹತ್ತಿರವಿರುವ ಅಪಾರ್ಟ್ ಮೆಂಟ್ (ಖಾತಾ ನಿರ್ಧರಣಾ ಸಂಖ್ಯೆ:28419/12924/1/83) ಒಂದರಲ್ಲಿ ಸುಮಾರು 35 ಫ್ಲಾಟ್ ಗಳಿಗೆ ನಮೂನೆ-2ನ್ನು ನೀಡಿರುವುದು ಕಂಡುಬಂದಿರುತ್ತದೆ. ಆದರೆ, ನಮೂನೆ-2ನ್ನು ನೀಡಲು ತೆರಿಗೆಯ ಮೊತ್ತ ರೂ.2,80,179/- ಗಳನ್ನು ಮಾಲೀಕರಿಂದ ಸಂಗ್ರಹಿಸಿ, ಪಾಲಿಕೆಯ ಖಾತೆಗೆ ಜಮಾ ಮಾಡದೇ ತೆರಿಗೆಯ ಮೊತ್ತವನ್ನು ದುರುಪಯೋಗ ಮಾಡಿಕೊಳ್ಳುವುದಲ್ಲದೇ ಬಳ್ಳಾರಿ ಒನ್ ರಸೀದಿಗಳನ್ನು ಕೊಟ್ಟಿ (ನಕಲು) ದಾಖಲೆಗಳನ್ನು ಸೃಷ್ಟಿಸಿರುವುದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆ. ತೆರಿಗೆ ಮೊತ್ತವನ್ನು ಪಾಲಿಕೆಯ ಖಾತೆಗೆ ಪಾವತಿಸದೇ ಇರುವ ಕಾರಣ, ಸದರಿ ಮೊತ್ತದ ಜೊತೆಗೆ ಶೇ.18%ರಷ್ಟು ಬಡ್ಡಿಯೊಂದಿಗೆ ಪಾಲಿಕೆಯ ಖಾತೆಗೆ ಹಿಂದುರುಗಿಸಿಕೊಂಡು ಕರ್ತವ್ಯ ನಿರ್ಲಕ್ಷ್ಯ ತೋರಿರುವ 1. ಶ್ರೀ ಎನ್. ವೀರೇಶ್ ಕುಮಾರ್, ಸಹಾಯಕ ಕಂದಾಯ ಅಧಿಕಾರಿ, 2. ಶ್ರೀ ಮನೋಹರ, ಪ್ರಥಮ ದರ್ಜೆ ಕಂದಾಯ ನಿರೀಕ್ಷಕರು, 3. ಶ್ರೀ ಕೆ. ದೊಡ್ಡಬಸಪ್ಪ, ದ್ವಿತೀಯ ದರ್ಜೆ ಸಹಾಯಕರು ರವರ ವಿರುದ್ಧ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) 1957ರ ನಿಯಮ-11ರ ಮೇರೆಗೆ ಶಿಸ್ತು ಕ್ರಮ ಜರುಗಿಸಲು ಉದ್ದೇಶಿಸಲಾಗಿದ್ದು, ಅನುಬಂಧ-1 ರಿಂದ 4 ರವರೆಗೆ ದೋಷಾರೋಪಣಾ ಪಟ್ಟಿಯನ್ನು ಜಾರಿ ಮಾಡಿ ಅನುಬಂಧ-1ರ ಪಟ್ಟಿಯಲ್ಲಿ ವಿವರಿಸಿರುವ ಆಪಾದನೆಗಳ ಬಗ್ಗೆ ಲಿಖಿತ ಸಮಜಾಯಿಷಿ ಯಾವುದಾದರೂ ಇದ್ದಲ್ಲಿ ಸಲ್ಲಿಸಬೇಕಾಗಿ ದಿನಾಂಕ:26.03.2025ರಂದು ನೋಟಿಸ್ ನೀಡಲಾಗಿರುತ್ತದೆ.<br>ಸದರಿ ನೋಟಿಸ್ ಗೆ ಆರೋಪಿತ ನೌಕರರಾದ 1. ಶ್ರೀ.ಎನ್.ವೀರೇಶ್ ಕುಮಾರ್, ಸಹಾಯಕ ಕಂದಾಯಾಧಿಕಾರಿ ರವರು ಹಾಗೂ 2. |

| | | |
|---|---|---|
| | | ಶ್ರೀ.ಮನೋಹರ, ಪ್ರಥಮ ದರ್ಜೆ ಕಂದಾಯ ನಿರೀಕ್ಷಕರುರವರು ದಿನಾಂಕ:08.04.2025 ರಂದು ಮತ್ತು 3. ಶ್ರೀ.ಕೆ.ದೊಡ್ಡಬಸಪ್ಪ, ದ್ವಿತೀಯ ದರ್ಜೆ ಸಹಾಯಕರು, ರವರು ದಿನಾಂಕ:11.04.2025ರಂದು ಲಿಖಿತ ಉತ್ತರವನ್ನು ಸಲ್ಲಿಸಿದ್ದು, ಆರೋಪಗಳನ್ನು ನಿರಾಕರಿಸಿ, ದೋಷಾರೋಪಣಾ ಪಟ್ಟಿಯಿಂದ ಕೈಬಿಡುವಂತೆ ಕೋರಿರುತ್ತಾರೆ.<br>ಸದರಿ ಲಿಖಿತ ಸಮಜಾಯಿಷಿಯು ಒಪ್ಪಲರ್ಹವಲ್ಲದ ಕಾರಣ, ಗ್ರೂಪ್ "ಸಿ ಮತ್ತು ಡಿ" ವೃಂದದ ನೌಕರರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳುವ ಅಧಿಕಾರವು ಮಹಾನಗರಪಾಲಿಕೆ ಆಯುಕ್ತರಿಗೆ ಪ್ರತ್ಯಾಯೋಜನೆಯಾಗಿರುವುದರಿಂದ, ಸದರಿಯವರುಗಳ ವಿರುದ್ಧದ ಆರೋಪಗಳ ಕುರಿತು ಜಂಟಿ ವಿಚಾರಣೆಯನ್ನು ನಡೆಸಲು ಉದ್ದೇಶಿಸಿ, ಆಯುಕ್ತರು, ಬಳ್ಳಾರಿ ಮಹಾನಗರ ಪಾಲಿಕೆ ರವರು ಆದೇಶ ಸಂಖ್ಯೆ: ಮನಪಾಬ/ಸಿಬ್ಬಂದಿ/ಸಿ.ಆರ್/ಜಂಟಿ ವಿಚಾರಣೆ/01/2025-26, ದಿನಾಂಕ: 31.05.2025ರಲ್ಲಿ ನಿವೃತ್ತ ನ್ಯಾಯಾಧೀಶರಾದ ಶ್ರೀ ಈಶ್ವರ್ ಜಂತ್ಲಿ, ದಾವಣಗೆರೆ, ಇವರನ್ನು ವಿಚಾರಣಾಧಿಕಾರಿಗಳನ್ನಾಗಿ ಹಾಗೂ ಈ ಹಿಂದಿನ ಸಾಂಖ್ಯಿಕ ಅಧಿಕಾರಿಗಳಾದ ಶ್ರೀ ರಮೇಶ್, ಸಹಾಯಕ ನಿರ್ದೇಶಕರು ರವರನ್ನು ಮಂಡನಾಧಿಕಾರಿಯನ್ನಾಗಿ ನೇಮಿಸಿ ಆದೇಶಿಸಲಾಗಿರುತ್ತದೆ.<br>ಅಲ್ಲದೆ, ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಬಳ್ಳಾರಿಯ ಗಾಂಧಿ ನಗರ ಪೋಲೀಸ್ ಠಾಣೆಯಲ್ಲಿ ಅಪರಾಧ ಸಂಖ್ಯೆ: 0135/2024ರನ್ವಯ ಪ್ರಕರಣ ದಾಖಲಿಸಲಾಗಿರುತ್ತದೆ. |
| (ಆ) | ಈ ಇಲಾಖಾ ವಿಚಾರಣೆಯು ಯಾವ ಹಂತದಲ್ಲಿದೆ: ಇಲ್ಲಿಯವರೆಗೆ ಎಷ್ಟು ವಿಚಾರಣಾ ಸಭೆಗಳನ್ನು ನಡೆಸಿದೆ: ಇದರಲ್ಲಿ ಕಂಡು ಬಂದ ಅಂಶಗಳೇನು: (ಸಂಪೂರ್ಣ ಮಾಹಿತಿ ಒದಗಿಸುವುದು): | ಪ್ರಸ್ತುತ ಇಲಾಖಾ ವಿಚಾರಣೆಯು ವಿಚಾರಣೆಯ ಹಂತದಲ್ಲಿದ್ದು, ಈವರೆಗೂ ವಿಚಾರಣಾಧಿಕಾರಿಗಳು ಒಟ್ಟು 06 ಸಭೆಗಳನ್ನು ನಡೆಸಿರುತ್ತಾರೆ, ಅಂತಿಮ ವಿಚಾರಣಾ ವರದಿ ಇನ್ನೂ ಸ್ವೀಕೃತವಾಗಿರುವುದಿಲ್ಲ. |
| (ಇ) | ಸುಮಾರು 2.80 ಲಕ್ಷಗಳಷ್ಟು ಹಣ ದುರುಪಯೋಗ ಮಾಡಿರುವ ಈ ಅಧಿಕಾರಿ/ಸಿಬ್ಬಂದಿಗಳನ್ನು ಪಾಲಿಕೆಯಲ್ಲಿಯೇ ಪುನರ್ ಸ್ಥಾಪಿಸಲು ಕಾರಣವೇನು: ಅಲ್ಲಿಯೇ ಪುನರ್ ಸ್ಥಾಪಿಸಿರುವುದರಿಂದ ಸಾಕ್ಷಿಗಳನ್ನು ತಿರುಚುವ ಸಂಭವವಿಲ್ಲವೇ: ಹಾಗಿದ್ದಲ್ಲಿ ಇಲಾಖೆ ಯಾವ ಕ್ರಮಕೈಗೊಳ್ಳುವುದು; ಇದಕ್ಕೆ ಜವಾಬ್ದಾರರು ಯಾರು: | ಬಳ್ಳಾರಿ ಮಹಾನಗರ ಪಾಲಿಕೆಯಲ್ಲಿ ಸಿಬ್ಬಂದಿಗಳ ಕೊರತೆಯಿದ್ದು, ಸಾರ್ವಜನಿಕರಿಗೆ ಅಗತ್ಯ ಸೇವೆಗಳನ್ನು ಒದಗಿಸಲು ತೊಡಕುಂಟಾಗುತ್ತಿರುವುದರಿಂದ ಹಾಗೂ ಗ್ರೂಪ್ "ಸಿ" ವೃಂದದ ನೌಕರರ ಶಿಸ್ತು ಪ್ರಾಧಿಕಾರವು ಸಂಬಂಧಿಸಿದ ಪಾಲಿಕೆಯ ಆಯುಕ್ತರಾಗಿರುವುದರಿಂದ, ಹಣ ದುರುಪಯೋಗ ಮಾಡಿರುವ ಸಿಬ್ಬಂದಿಗಳನ್ನು ಅವರು ಕಾರ್ಯನಿರ್ವಹಿಸುತ್ತಿದ್ದ ವಲಯ ಕಛೇರಿಯನ್ನು ಹೊರತುಪಡಿಸಿ ಪಾಲಿಕೆಯ ಇತರ ವಲಯ ಕಛೇರಿಯಲ್ಲಿ ಪುನರ್ ಸ್ಥಾಪಿಸಲಾಗಿರುತ್ತದೆ. |
| (ಈ) | ಈ ವಿಷಯಕ್ಕೆ ಸಂಬಂಧಿಸಿದಂತೆ ಬಳ್ಳಾರಿಯ ಗಾಂಧಿ ನಗರ ಪೋಲೀಸ್ ಠಾಣೆಯಲ್ಲಿನ ಪ್ರಥಮ ವರ್ತಮಾನ ವರದಿ ಸಂಖ್ಯೆ 0135/2024ರ ಮೇಲೆ ಇಲ್ಲಿಯವರೆಗೂ ಆಗಿರುವ ವಿಚಾರಣಾ ಪ್ರಗತಿ ಏನು: ನ್ಯಾಯಾಲಯಕ್ಕೆ ಚಾರ್ಜ್‌ಶಿಟ್ | ಹಣ ದುರುಪಯೋಗಪಡಿಸಿಕೊಂಡ ಆರೋಪದಲ್ಲಿ ಭಾಗಿಯಾದ ಸಿಬ್ಬಂದಿಗಳ ವಿರುದ್ಧ ಗಾಂಧಿನಗರ ಪೋಲೀಸ್ ಠಾಣೆಯಿಂದ ನ್ಯಾಯಾಲಯಕ್ಕೆ ಚಾರ್ಜ್ ಶೀಟ್ ಸಲ್ಲಿಸಲಾಗಿರುತ್ತದೆ. |

| | | |
|---|---|---|
| | ಸಲ್ಲಿಸಲಾಗಿದೆಯೇ: (ಮಾಹಿತಿ ಒದಗಿಸುವುದು) | |
| (ಉ) | ಈ ವಿಷಯದಲ್ಲಿ ಸರ್ಕಾರಿ ನೌಕರರುಗಳೇ ಇಲಾಖೆಗೆ ಮೋಸ ಮಾಡಿರುವುದು ಕಂಡು ಬರುತ್ತಿರುವುದರಿಂದ ಅಮಾಯಕ ಸಾರ್ವಜನಿಕರು ಸರ್ಕಾರಿ ನೌಕರರ ಮೂಲಕ ಕಟ್ಟಿರುವ ಆಸ್ತಿ ತೆರಿಗೆ ವಿಷಯದಲ್ಲಿ ಇಲಾಖೆಯ ಸ್ಪಷ್ಟ ನಿರ್ಧಾರಗಳೇನು: ತೆರಿಗೆ ಕಟ್ಟಿರುವ ಇವರುಗಳಿಗೆ ನ್ಯಾಯ ನೀಡಲು ಹಾಗೂ ಇವರುಗಳ ಹಿತಾಸಕ್ತಿ ಕಾಪಾಡಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ?(ವಿವರಗಳನ್ನು ಒದಗಿಸುವುದು); | ಹಣ ದುರುಪಯೋಗಪಡಿಸಿಕೊಂಡ ಅಧಿಕಾರಿ/ನೌಕರರನ್ನು ಅಮಾನತ್ತುಗೊಳಿಸಿ, ನಿಯಮಗಳಂತೆ 06 ತಿಂಗಳೊಳಗಾಗಿ ಪುನರ್ ಸ್ಥಾಪಿಸಲಾಗಿರುತ್ತದೆ.<br>ಸದರಿಯವರ ವಿರುದ್ಧ ನಿವೃತ್ತ ನ್ಯಾಯಾಧೀಶರನ್ನು ವಿಚಾರಣಾಧಿಕಾರಿಗಳನ್ನಾಗಿ ನೇಮಿಸಿ, ಆದೇಶಿಸಲಾಗಿದ್ದು, ವಿಚಾರಣಾ ಪ್ರಕ್ರಿಯೆಯು ಚಾಲ್ತಿಯಲ್ಲಿರುತ್ತದೆ.<br>ಮುಂದುವರೆದು, ಪಾಲಿಕೆಯ ಕಾರ್ಯಪಾಲಕ ಅಭಿಯಂತರರು ಹಾಗೂ ಸಹಾಯಕ ಕಾರ್ಯಪಾಲಕ ಅಭಿಯಂತರರು(ಪರಿಸರ) ಇವರನ್ನು ಒಳಗೊಂಡ ಪ್ರಾಥಮಿಕ ತನಿಖಾ ಸಮಿತಿಯನ್ನು ರಚಿಸಿದ್ದು, ದಿನಾಂಕ:10.12.2024 ರಂದು ಸಮಿತಿಯು ನೀಡಿದ ವರದಿಯಲ್ಲಿ ದಿನಾಂಕ:11.11.2024 ರಂದು ಪುನಃ ತೆರಿಗೆಯನ್ನು ಪಾವತಿಸಿ, ತೆರಿಗೆ ರಸೀದಿಗಳನ್ನು ಮಾಲೀಕರಿಗೆ ಸಲ್ಲಿಸಿರುವುದಾಗಿ ತಿಳಿಸಲಾಗಿರುತ್ತದೆ.<br>ಪಾಲಿಕೆಗೆ ತಡವಾಗಿ ಪಾವತಿಸಿ ಹಣ ದುರ್ಬಳಕೆ ಮಾಡಿಕೊಂಡಿರುವುದರಿಂದ, ಬಡ್ಡಿ ಸಮೇತ ವಸೂಲಿಗೆ ಕ್ರಮವಹಿಸಲಾಗುವುದು ಹಾಗೂ ಇಲಾಖಾ ವಿಚಾರಣೆಯ ಅಂತಿಮ ವರದಿ ಸ್ವೀಕೃತವಾದ ನಂತರ ನಿಯಮಾನುಸಾರ ಕ್ರಮಕ್ಕೈಗೊಳ್ಳಲಾಗುವುದು. |

**ನಅಇ 8 ಎಬಿಸಿ 2026(ಇ)**

(ಬಿ. ಎಸ್. ಸುರೇಶ)
ನಗರಾಭಿವೃದ್ಧಿ ಹಾಗೂ ನಗರ ಯೋಜನೆ
ಸಚಿವರು.